ಓದುವುದರಲ್ಲಿ ಬುದ್ಧಿವಂತರಾಗಿರುವುದಿಲ್ಲ. ಬದಲಾಗಿ ಅವರು ಸಮಯ ನಿರ್ವಹಣೆಯ ಕೌಶಲವನ್ನು ಚೆನ್ನಾಗಿ ಅರಿತಿರುತ್ತಾರೆ! ಶಿಕ್ಷಕರು ಹೆಚ್ಚಿನ ಸಮಯ ಪರೀಕ್ಷೆಯಲ್ಲಿ ಹೇಗೆ ಸಮಯವನ್ನು ನಿಭಾಯಿಸಬೇಕು ಎನ್ನುವುದರ ಬಗೆಗೆ ಸೂಚನೆಗಳನ್ನು ಎಲ್ಲರಿಗೂ ನೀಡಿರುತ್ತಾರೆ. ಆದರೆ ಹೆಚ್ಚಿನ ಮಕ್ಕಳು ಅದರ ಬಗ್ಗೆ ಪ್ರಾಯೋಗಿಕವಾಗಿ ಪ್ರಯತ್ನಿಸಿರುವುದಿಲ್ಲ. ಶಾಲೆಯ ತರಗತಿ ಪರೀಕ್ಷೆಗಳು, ಪೂರ್ವ ಸಿದ್ಧತಾ ಪರೀಕ್ಷೆಗಳಷ್ಟೇ ಅವರ 'ಪ್ರಯೋಗ' ಸೀಮಿತವಾಗಿರುತ್ತದೆ.

ವಿದ್ಯಾರ್ಥಿಯಿಂದ ವಿದ್ಯಾರ್ಥಿಗೆ ಆತ್ಮವಿಶ್ವಾಸದ ಮಟ್ಟ, ಬರವಣಿಗೆಯ ವೇಗ, ಬೌದ್ಧಿಕ ಸಾಮರ್ಥ್ಯ ಬೇರೆ ಬೇರೆಯಾಗಿರುತ್ತದೆಯಷ್ಟೆ. ಪರಿಣಾಮ ಪ್ರತಿಯೊಬ್ಬರೂ ತಮ್ಮ ಸಮಯದ ನಿರ್ವಹಣಾ ಕೌಶಲವನ್ನು ವೈಯಕ್ತಿಕವಾಗಿ ರೂಪಿಸಿಕೊಳ್ಳ ಬೇಕಾಗುತ್ತದೆ. ಪರೀಕ್ಷೆಯಲ್ಲಿ ಕೊನೆಯಲ್ಲಿ ಅಂಕಪಟ್ಟಿಯಲ್ಲಿ ನಿಮಗೆಷ್ಟು ಸಮಯ ಸಾಲಲಿಲ್ಲ, ನೀವೆಷ್ಟು ಬರೆದಿದ್ದಕ್ಕೆ ಎಷ್ಟು ಮಾರ್ಕ್ಸ್ ಬಂತು ಎಂಬುದರ ಬದಲು 2– –3 ಗಂಟೆಯ ಸಮಯದಲ್ಲಿ 100ಕ್ಕೆ ನಿಮಗೆಷ್ಟು ಅಂಕ ಬಂದಿದೆ ಎಂಬುದು ದಾಖಲಾಗಿರುತ್ತದಷ್ಟೆ! ಹಾಗಾಗಿ ಮತ್ತೆ ಮತ್ತೆ ಹಳೆಯ/ ನೀವು ಅಥವಾ ನಿಮ್ಮ ಶಿಕ್ಷಕರು ರೂಪಿಸಿಕೊಡಬಹುದಾದ ಹೊಸ ಪ್ರಶ್ನೆಪತ್ರಿಕೆಗಳನ್ನು ಉತ್ತರಿಸುವುದು ಆತ್ಮವಿಶ್ವಾಸ, ಬರವಣಿಗೆಯ ವೇಗ ಇವೆರಡನ್ನೂ ಖಂಡಿತವಾಗಿ ಹೆಚ್ಚಿಸುತ್ತದೆ.

ಕೆಲವೊಮ್ಮೆ ಸಮಯ ನಿರ್ವಹಣೆಯಲ್ಲಿ ನೀವು ಉಪಯೋಗಿಸುವ ಪೆನ್ನು, ಪೆನ್ಸಿಲ್‌ಗಳೂ ಪಾತ್ರ ವಹಿಸುತ್ತವೆ. ಕೆಲವರಿಗೆ ಜೆಲ್ ಪೆನ್ನು ವೇಗದ ಬರವಣಿಗೆಗೆ ಅಂದವಾದ ಬರಹಕ್ಕೆ ಸಹಾಯಕ. ಮತ್ತೆ ಕೆಲವರಿಗೆ ಬಾಲ್ ಪೆನ್ನು ಹೆಚ್ಚು ಸೂಕ್ತ. ಆದರೆ ಎರಡರಲ್ಲೂ ಬರೆದು ನೋಡಿ, ಪ್ರಾಕ್ಟೀಸ್ ಮಾಡದ ಹೊರತು ನಮಗೆ ಯಾವುದು ಸೂಕ್ತವೆಂದು ತಿಳಿಯುವುದು ಹೇಗೆ? ಹಾಗಾಗಿ ಸಮಯದ ಮಿತಿಯಿಟ್ಟುಕೊಂಡು, ಎರಡರಲ್ಲೂ ಒಂದೊಂದು ಪತ್ರಿಕೆಯನ್ನು ಮನೆಯಲ್ಲಿ ಉತ್ತರಿಸಿದರೆ ನಿಮಗೆ ಸೂಕ್ತವಾದದ್ದು ಯಾವುದೆಂದು ನೀವೇ ಕಂಡುಹಿಡಿಯಲು ಸಾಧ್ಯ.

ವಿದ್ಯಾರ್ಥಿಗಳು ಮಾಡುವ ಇನ್ನೊಂದು ಸಾಮಾನ್ಯ ತಪ್ಪೆಂದರೆ ತಮಗೆ ಗೊತ್ತಿರುವ ಪ್ರಶ್ನೆಗೆ ಉತ್ತರವನ್ನು ಬರೆಯುತ್ತಾ ಸಮಯ ವ್ಯರ್ಥ ಮಾಡುವುದು. ಅಥವಾ ಗೊತ್ತಿರದಿರುವ ಪ್ರಶ್ನೆಗೆ ಯೋಚಿಸುತ್ತಾ ಕುಳಿತು ಮಿಕ್ಕ ಬರುವ ಪ್ರಶ್ನೆಗಳಿಗೂ ಉತ್ತರ ಸರಿಯಾಗಿ ಬರೆಯದಿರುವುದು. ಪ್ರತಿ ಪ್ರಶ್ನೆಪತ್ರಿಕೆಯ ಮಾದರಿ ಮೊದಲೇ ಗೊತ್ತಿರುತ್ತದಷ್ಟೆ. ಅದನ್ನು ಪ್ರತಿ ಪ್ರಶ್ನೆಗೆ ಇಂತಿಷ್ಟು ಸಮಯ ಎಂದು ಗುರುತಿಸಿಕೊಂಡು ನಿರ್ದಿಷ್ಟ ಸಮಯ ಮುಗಿದ ತಕ್ಷಣ ಮುಂದಿನ ಪ್ರಶ್ನೆಗೆ ಹೋಗಿ. ಬೇಕಿದ್ದರೆ ಸ್ವಲ್ಪ ಜಾಗ ಬಿಡಿ. ಈ ರೀತಿ ಬರೆಯುತ್ತಾ, ಬರೆಯುತ್ತಾ ಸಹಜವಾಗಿ ನಿಮ್ಮ ಸಮಯ ನಿರ್ವಹಣೆ ಸುಧಾರಿಸುತ್ತದೆ.

### 4. 'ಪುನರ್ ಮನನ'ದ ತಯಾರಿ

"ನನಗೆ ಮೊದಲು ಎಷ್ಟು ಓದಿದ್ದರೂ ಸರಿ, ಪರೀಕ್ಷೆಯ ಹಿಂದಿನ ದಿನ 'ರಿವೈಸ್' ಮಾಡದಿದ್ದರೆ ಆ ಪರೀಕ್ಷೆ ಠುಸ್ ಅಂತಲೇ. ಅದಕ್ಕೇ ನಾನು ರಾತ್ರಿಯೆಲ್ಲಾ 'ರಿವೈಸ್' ಮಾಡ್ದೆ ಹೋಗೋದೇ ಇಲ್ಲ".

"ರಿವಿಷನ್‌ಗೆ ಅಂತ ನಾನೇನೋ ಟೈಮ್ ಟೇಬಲ್ ಹಾಕ್ಕೋತೀನಿ. ಆದರೆ ಆಮೇಲೆ ನೋಡಿದ್ರೆ ಅದನ್ನು ಯಾವತ್ತೂ ಸರಿಯಾಗಿ ಮುಗಿಸೋಕ್ಕೆ ಆಗೋದೇ ಇಲ್ಲ. ಪೂರ್ತಿ ಓದಿದ್ದೀನಿ, ಚೆನ್ನಾಗಿ ಬರುತ್ತೆ ಅನ್ನೋ ಸಬ್ಜೆಕ್ಟ್ ತೆಗೆದು ನೋಡಿದ್ರೆ ಮತ್ತೆ ಏನನ್ನೋ ಬಿಟ್ಟಿದ್ದೀನಿ ಅಂತ ಗೊತ್ತಾಗುತ್ತೆ. ಅದನ್ನು ಓದಿ ಮುಗಿಸಿಯೇ ಮುಂದೆ ಹೋಗೋಣ ಅನ್ನೋ ಅಷ್ಟರಲ್ಲಿ ಆ ದಿನ ಕಳೆದು ಹೋಗಿರುತ್ತೆ. ಟೈಮ್‌ಟೇಬಲ್ ಹಿಂದೆ ಹೋಗಿಬಿಡುತ್ತೆ".

– ಇವೆಲ್ಲಾ ನಿಮ್ಮ ಅನುಭವವೂ ಹೌದೆ? 'ಪುನರಾವರ್ತನೆ' ಪರೀಕ್ಷೆಯಲ್ಲಿ

